**ಹಿರಿಯ ದಿವಾಣಿ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ತಿ. ನರಸೀಪುರ**

**ಸಿಸಿ ಸಂಖ್ಯೆ: 5/2022**

ಚಾ.ಸಾ–01, ಫ್ರಾ.ಸಾ–01

| | | |
|---|---|---|
| ಹೆಸರು | : | ಎಸ್. ಜಗದೀಶ |
| ತಂದೆಯ ಹೆಸರು | : | ಲೇಟ್ ಸಿದ್ದಯ್ಯ |
| ವಯಸ್ಸು | : | 49 |
| ವೃತ್ತಿ | : | ವಕೀಲರು |
| ವಾಸ | : | ಸೋಸಲೆ ಗ್ರಾಮ, ತಿ. ನರಸೀಪುರ ತಾಲ್ಲೂಕು |

**ದಿನಾಂಕ 07.03.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ**

ಚಾಸಾ–7 ರವರ ಪರಿಚಯವಿದೆ. ಆರೋಪಿತರ ಪರಿಚಯವಿಲ್ಲ.

ನಾನು ತಿ. ನರಸೀಪುರ ಪಟ್ಟಣದ ತ್ರಿವೇಣಿ ನಗರದಲ್ಲಿ ಬುದ್ದರಾಮ ಮಂದಿರ ರಸ್ತೆಯಲ್ಲಿರುವ ಚಾಸಾ–7 ರವರ ಮನೆಯಲ್ಲಿ ಬಾಡಿಗೆಗೆ ಇದ್ದೆ. ಅಲ್ಲಿ ಯಾವುದೇ ಕಳ್ಳತನ ಆಗಿರಲಿಲ್ಲ. ನಾನು ಪೊಲೀಸರಿಗೆ ದೂರು ಮತ್ತು ಮುಂದುವರೆದ ಹೇಳಿಕೆ ನೀಡಿಲ್ಲ. ಪೊಲೀಸರು ನನ್ನ ಸಮಕ್ಷಮ ಪಂಚನಾಮಗಳನ್ನು ಜರುಗಿಸಿಲ್ಲ.

ನನಗೆ ಈಗ ತೋರಿಸಿದ ದಾಖಲೆಗಳಲ್ಲಿ ನನ್ನ ಸಹಿಗಳು ಇವೆ. ಆ ದಾಖಲೆಗಳು ದೂರು ಮತ್ತು ಪಂಚನಾಮಗಳಾಗಿದ್ದು, ಅವುಗಳನ್ನು ಕ್ರಮವಾಗಿ ನಿಪಿ.1 ರಿಂದ 3 ಎಂದು ಮತ್ತು ಅವುಗಳಲ್ಲಿರುವ ಸಾಕ್ಷಿಯ ಸಹಿಗಳನ್ನು ನಿಪಿ.1(ಎ) ಯಿಂದ 3(ಎ) ಎಂದು ಗುರುತಿಸಲಾಯಿತು.

**ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಕೋರಿದ್ದು, ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ವಿರುದ್ಧವಾಗಿ**

**ಸಾಕ್ಷ್ಯ ನುಡಿದಿರುವುದರಿಂದ, ಮಾನ್ಯ ಎಪಿಪಿ ರವರ ಕೋರಿಕೆಯನ್ನು ಪರಿಗಣಿಸಿ ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ**

ಈ ಮೇಲೆ ಹೇಳಿದ ಬಾಡಿಗೆ ಮನೆಯಲ್ಲಿ ದಿನಾಂಕ 11.03.2020 ರಂದು ರಾತ್ರಿ ವೇಳೆಯಲ್ಲಿ ಆರೋಪಿತರು ಸದರಿ ಮನೆಯ ಬಾಗಿಲು ಮತ್ತು ಬೀಗವನ್ನು ಮುರಿದು, ಮನೆಯೊಳಗಿದ್ದ ಬೀರುವಿನಲ್ಲಿ ರೂ.12,000-00ನ್ನು ಕಳವು ಮಾಡಿ ಮತ್ತು ಇತರ ವಸ್ತುಗಳನ್ನು ಹಾಳು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಗಾಗಿ ನಿಪಿ-1 ರಂತೆ ದೂರನ್ನು ನಾನು ನೀಡಿರುತ್ತೇನೆ ಎಂದರೆ ಸರಿಯಲ್ಲ.

ದಿನಾಂಕ 11.03.2020 ರಂದು ಬೆಳಿಗ್ಗೆ 7.30 ರಿಂದ 8.15 ಗಂಟೆ ಸಮಯದಲ್ಲಿ ನಾನು ತೋರಿಸಿದಂತೆ ಪೊಲೀಸರು ಘಟನಾ ಸ್ಥಳದಲ್ಲಿ ಚಾಸಾ-2 ಮತ್ತು 3 ರವರ ಸಮಕ್ಷಮ ಪಂಚನಾಮವನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 17.07.2021 ರಂದು ಸಂಜೆ 4.00 ರಿಂದ 4.30 ಗಂಟೆ ಸಮಯದಲ್ಲಿ ಆರೋಪಿತರು ತೋರಿಸಿದಂತೆ ಪೊಲೀಸರು ಘಟನಾ ಸ್ಥಳದಲ್ಲಿ ನನ್ನ, ಚಾಸಾ-4 ಮತ್ತು 5 ರವರ ಸಮಕ್ಷಮ ಪಂಚನಾಮವನ್ನು ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ.

ದಿನಾಂಕ 12.03.2020 ರಂದು ನಾನು ಘಟನೆಯ ಕುರಿತು ಪೊಲೀಸರಿಗೆ ಮುಂದುವರೆದ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಅದನ್ನು ತಿರಸ್ಕರಿಸಿದ್ದರಿಂದ, ಅದನ್ನು ನಿಪಿ.4 ಎಂದು ಗುರುತಿಸಲಾಯಿತು.

ನಾನು ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದ ಇರುವುದಿಲ್ಲ.**

**ಮರು ವಿಚಾರಣೆ ಇರುವುದಿಲ್ಲ.**

(ತೆ ನ್ಯಾದಲ್ಲಿ ಬೆರಳಚ್ಚುಗೊಳಿಸಲಾಯಿತು)
ಓ ಹೇ ಕೇ ಸರಿ ಇದೆ

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದ. ತಿ.ನರಸೀಪುರ**